**ಸಾಕ್ಷಿಯನ್ನು ದಿ:23.03.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಭೋಗ್ಯ ಪತ್ರದಲ್ಲಿ ಇರುವ ಆಸ್ತಿಗೆ ಹಾಗೂ ದಾವಾ ಆಸ್ತಿಗೆ ಸಂಬಂಧ ಇದೆಯಾ ಎಂದರೆ, ಎರಡೂ ಒಂದೇ ನಿವೇಶನ ಎಂದು ನುಡಿಯುತ್ತಾರೆ.

2. ಸದರಿ ಸ್ವತ್ತಿಗೆ ಭೋಗ್ಯಪತ್ರದಲ್ಲಿ ಪೂರ್ವಕ್ಕೆ: ಭೋಗ್ಯದಾರನ ಜಮೀನು ಹಾಲಿ ಪುಟ್ಟೇಗೌಡರು ಹಾಗೂ ಗೋಪಾಲಮ್ಮನವರ ಮನೆ ಜಾಗ, ಪಶ್ಚಿಮಕ್ಕೆ ಪುಟ್ಟೇಗೌಡ ತೋಪಣ್ಣ ರವರ ಮನೆ, ಉತ್ತರಕ್ಕೆ: ರಾಜಬೀದಿ ಹಾಗೂ ದಕ್ಷಿಣಕ್ಕೆ: ಓಣಿ ಎಂದು ಬರೆದಿದ್ದಾರೆ. ಸದರಿ ಸ್ವತ್ತಿಗೆ ನಿಮ್ಮ ತಾತ ಕರಿಗೌಡರು ಮಾಲೀಕರು ಎಂಬ ಬಗ್ಗೆ ದಾಖಲೆ ನೀಡಿದ್ದೀರಾ ಎಂದರೆ, ಭೋಗ್ಯಪತ್ರ ನೀಡಿದ್ದೇವೆ. ಭೋಗ್ಯ ಪತ್ರ ಬಿಟ್ಟರೆ ಬೇರೆ ದಾಖಲೆ ಇಲ್ಲ ಎಂದರೆ ಸರಿ.

3. ಸ್ವತ್ತಿನ ಅಳತೆಯನ್ನು ಭೋಗ್ಯಪತ್ರದ ಆಧಾರದ ಮೇಲೆ ಹೇಳುತ್ತಿದ್ದೇನೆ.

4. ಭೋಗ್ಯಪತ್ರದಲ್ಲಿ ಭೋಗ್ಯ ಬಿಡುಗಡೆ ಆಗುವರೆಗೆ ಭೋಗ್ಯ ಮಾಡಿಕೊಂಡವರ ಸ್ವಾಧೀನದಲ್ಲಿ ಇರುತ್ತದೆ ಎಂದು ಬರೆದಿದ್ದಾರೆ ಎಂದರೆ, ನಾನು ನೋಡಿಲ್ಲ.

5. ಭೋಗಪತ್ರ ಬಿಡುಗಡೆ ಆಗಿದೆಯಾ ಇಲ್ಲವಾ ಎಂದು ನನಗೆ ಮಾಹಿತಿ ಇಲ್ಲ. ಆ ಬಗ್ಗೆ ತಿಳಿದುಕೊಳ್ಳಲು ತೊಂದರೆ ಇದೆಯಾ ಎಂದರೆ, ಪಂಚಾಯತಿಗೆ ಅರ್ಜಿ ನೀಡಿದ್ದೇವೆ.

6. ಪ್ರತಿವಾದ ಪತ್ರದಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಭೋಗ್ಯಪತ್ರದ ಬಗ್ಗೆ ಹೇಳಿದ್ದೇವೆ. ಆ ರೀತಿ ಹೇಳದೇ ಇದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

7. ಭೋಗ್ಯಪತ್ರದಲ್ಲಿ ಜಂಜರ್ ನಂ.620 ಎಂದು ಇದೆ. ಅಸೆಸ್ಮೆಂಟ್ ನಂಬರ್ ಗೊತ್ತಿಲ್ಲ.

8. ಜಂಜರ್ ನಂ.620 ಹಾಗೂ ಜಂಜರ್ ನಂ.59 ಬೇರೆ ಬೇರೆ ಎಂದರೆ, ಆ ರೀತಿ ಸೃಷ್ಠಿಸಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆ ಬಗ್ಗೆ ನನಗೆ ಪಂಚಾಯತಿಯಲ್ಲಿ 5 ವರ್ಷದ ಹಿಂದೆ ಪರಿಶೀಲನೆ ಮಾಡಿದಾಗ ಗೊತ್ತಾಗಿದೆ.

9. ಮೋಸದಿಂದ ಸೃಷ್ಠಿ ಮಾಡಿದ ಬಗ್ಗೆ ಗೊತ್ತಾದ ನಂತರ ಇಒ ರವರಿಗೆ ಮೇಲ್ಮನವಿ ಸಲ್ಲಿಸಿಲ್ಲ, ಪಂಚಾಯತಿಗೆ ಕೊಟ್ಟಿದ್ದೇವೆ. ಸದರಿ ಜಾಗ ನಮಗೆ ಪಿತ್ರಾರ್ಜಿತವಾಗಿ ಬಂದಿದ್ದರೂ ಅಕ್ರಮವಾಗಿ ಖಾತೆ ಮಾಡಿಕೊಂಡಿದ್ದಾರೆ ಎಂದು ಅರ್ಜಿ ನೀಡಿದ್ದೇವೆ. ಆ ಬಗ್ಗೆ ಇನ್ನೂ ಹಿಂಬರಹ ನೀಡಿಲ್ಲ. ಸದರಿ ವಿಚಾರವನ್ನು ಪ್ರತಿವಾದಪತ್ರದಲ್ಲಿ ಹೇಳಿಲ್ಲ ಆರ್.ಟಿ.ಐ ಅರ್ಜಿ ಹಾಕಿದ ಬಗ್ಗೆ ಬರೆಸಿದ್ದೇವೆ. ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇವೆ.

10. ನೀವು ಸುಳ್ಳು ಸೃಷ್ಠಿ ಮಾಡಿದ್ದರಿಂದ ಯಾವುದೇ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ.

11. ಸದರಿ ಭೋಗ್ಯಪತ್ರದಲ್ಲಿರುವ ನಿವೇಶನ ಹಾಗೂ ದಾವಾ ಸ್ವತ್ತು ಬೇರೆ ಬೇರೆ ಎಂದರೆ ಸರಿಯಲ್ಲ.

12. ದಾವಾ ಸ್ವತ್ತು ವಾದಿಯ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿಯಲ್ಲ.

13. ಸದರಿ ಸ್ವತ್ತಿನ ಪೂರ್ವ ಪಶ್ಚಿಮಕ್ಕೆ ತೋಪಮ್ಮನ ಮನೆ ಇದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಹಾಗೂ ಬಾವಿ ಇದೆ ಎಂದರೆ ಸರಿ. ದಕ್ಷಿಣಕ್ಕೆ ಹಳೆ ಕೊಪ್ಪಲಿಗೆ ಹೋಗುವ ಓಣಿ ಇದೆ ಎಂದರೆ ಸರಿ. ಸದರಿ ಚಕ್ಕುಬಂದಿಯಲ್ಲಿ ಹುಚ್ಚೇಗೌಡರು ಈಗಲೂ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ, ನಾವೇ ಸ್ವಾಧೀನದಲ್ಲಿ ಇದ್ದೇವೆ.

14. ದಾವಾ ಸ್ವತ್ತಿನಲ್ಲಿ ನಿಮ್ಮ ತಾತ ಅಥವಾ ನಿಮ್ಮ ತಂದೆ ತಾಯಿ ಸ್ವಾಧೀನ ಹೊಂದಿರಲಿಲ್ಲ ಎಂದರೆ ಸರಿಯಲ್ಲ.

15. ದಾವಾ ನಿವೇಶನ ಈಗಲೂ ಹುಚ್ಚೇಗೌಡರು ಕಂದಾಯ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ, ನನ್ನ ತಾತ ಹಾಗೂ ತಂದೆ ಕಟ್ಟಿದ್ದಾರೆ. ಆ ಬಗ್ಗೆ ರಶೀದಿಗಳನ್ನು ನಾನು ನೋಡಿಲ್ಲ. ನೀವು ಯಾವುದೇ ಕಂದಾಯ ಕಟ್ಟಿಲ್ಲ ಎಂದರೆ ಸರಿಯಲ್ಲ.

16. ದಾವಾ ಸ್ವತ್ತಿನ ಮೇಲೆ ನಿಮಗೆ ಅಥವಾ ಪ್ರತಿವಾದಿಗಳಿಗೆ ಹಾಗೂ ನಿಮ್ಮ ತಾತನಿಗೆ ಯಾವುದೇ ಹಕ್ಕು ಮಾಲೀತ್ವ ಇಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನೀವು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಕೊಟ್ಟಿದ್ದೇವೆ.

17. ಹೇಗಾದರೂ ಮಾಡಿ ವಾದಿಗಳ ನಿವೇಶನ ಕಬಳಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

18. ಮುಖ್ಯ ವಿಚಾರಣೆ ಪ್ರಮಾಣ ಪತ್ರ ಹಾಗೂ ಪ್ರತಿವಾದಪತ್ರದ ಅಂಶಗಳಿಗೆ ಹೊಂದಾಣಿಕೆ ಇಲ್ಲ ಎಂದರೆ ಸರಿಯಲ್ಲ.

19. ವಾದಿಗಳು ತೊಂದರೆ ಕೊಟ್ಟಿದ್ದನ್ನು ನೋಡಿದವರು ಇದ್ದಾರಾ ಎಂದರೆ ನಮ್ಮ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ.

20. ಈ ದಾವೆಯ ಬಗ್ಗೆ ನಿಮಗೆ ಯಾವುದೇ ಖುದ್ದು ಮಾಹಿತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

21. ನನಗೆ ಅಧಿಕಾರ ಪತ್ರವನ್ನು ನನ್ನ ತಂದೆಗೆ ತಿಳುವಳಿಕೆ ಕಡಿಮೆ ಇರುವುದರಿಂದ ನನಗೆ ಬರೆದುಕೊಟ್ಟಿದ್ದಾರೆ. ಆ ಬಗ್ಗೆ ವೈದ್ಯಕೀಯ ದಾಖಲೆ ವಕೀಲರಿಗೆ ನೀಡಿದ್ದೇವೆ.

22. ನಿಮ್ಮ ತಂದೆಗೆ ಯಾವುದೇ ಸಮಸ್ಯೆ ಇಲ್ಲದಿದ್ದರೂ ಅವರು ಬಂದರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.) ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ